RNU AIR DHARWAD

MARCH 17, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಮಂಗಳೂರು ಪೊಲೀಸರಿಂದ, 75 ಕೋಟಿ ರೂಪಾಯಿ ಮೌಲ್ಯದ, ಮಾದಕ ದ್ರವ್ಯ ವಶ; ಮುಖ್ಯಮಂತ್ರಿ ಶ್ಲಾಘನೆ.**
- **ಶಿಕ್ಷಣ ಇಲಾಖೆಯಿಂದ, ಶೀಘ್ರ 5 ಸಾವಿರ ಶಿಕ್ಷಕರ ನೇಮಕಾತಿ – ಸಚಿವ ಮಧು ಬಂಗಾರಪ್ಪ.**
- **ಕಾರವಾರ 'ಕೋಸ್ಟಲ್ ಮರೈನ್ ಸೆಲ್'; 10 ಸಾವಿರ, ಹಸಿರು ಕಡಲಾಮೆ ಮೊಟ್ಟೆ ಹಾಗೂ ಮರಿ ರಕ್ಷಿಸಿ, ಸಮುದ್ರಕ್ಕೆ ಬಿಡುಗಡೆ.**
- **ಆಡಳಿತ ಪಕ್ಷ ಹಾಗೂ ಪ್ರತಿಪಕ್ಷದ ಸಹಮತದಿಂದ, ಅಭಿವೃದ್ಧಿ ಸಾಧ್ಯ – ರಾಜ್ಯಪಾಲ ಥಾವರಚಂದ್ ಗೆಹ್ಲೋಟ್.**

<><><>

**ಈಗ ವಾರ್ತೆಗಳ ವಿವರ**

<><><>

**ದಕ್ಷಿಣ ಆಫ್ರಿಕಾ ಮೂಲದ, ಇಬ್ಬರು ಮಾದಕ ವಸ್ತು ಸಾಗಣೆದಾರರನ್ನು, ಮಂಗಳೂರು ಪೊಲೀಸರು, ಬೆಂಗಳೂರಿನ ನೀಲಾದ್ರಿಯಲ್ಲಿ ಬಂಧಿಸಿದ್ದಾರೆ. ಮಂಗಳೂರು ಪೊಲೀಸ್ ಆಯುಕ್ತ ಅನುಪಮ್ ಅಗ್ರವಾಲ್, ಕಾರ್ಯಾಚರಣೆ ಕುರಿತು, ಮಂಗಳೂರಿನಲ್ಲಿ ಮಾಹಿತಿ ನೀಡಿ, ಅಂದಾಜು 75 ಕೋಟಿ ರೂಪಾಯಿ ಮೌಲ್ಯದ, 37 ದಶಾಂಶ 8–7 ಕಿಲೋ ತೂಕದ ಎಂ.ಡಿ.ಎಂ.ಎ. ಮಾದಕ ದ್ರವ್ಯವನ್ನು, ವಶಪಡಿಸಿಕೊಂಡಿದ್ದಾಗಿ, ತಿಳಿಸಿದರು.**

<><><>

**ರಾಜ್ಯದ ಇತಿಹಾಸದಲ್ಲೇ ಅತೀ ದೊಡ್ಡ ಪ್ರಮಾಣದ ಮಾದಕ ದ್ರವ್ಯ ಜಾಲವನ್ನು ಪತ್ತೆಹಚ್ಚಿ, ಇಬ್ಬರು ಆರೋಪಿಗಳನ್ನು ಬಂಧಿಸಿರುವ, ಮಂಗಳೂರು ಸಿಟಿ ಪೊಲೀಸರ ಕಾರ್ಯಾಚರಣೆ ಶ್ಲಾಘನೀಯ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.**

<><><>

ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ, ಸಾವಿರದ 800 ಶಿಕ್ಷಕರು ಹಾಗೂ ಒಟ್ಟಾರೆ ಇಡೀ ರಾಜ್ಯಕ್ಕೆ, 5 ಸಾವಿರ ಶಿಕ್ಷಕರ ನೇಮಕಾತಿಗೆ, ಶೀಘ್ರ ಪ್ರಕ್ರಿಯೆ ಆರಂಭವಾಗಲಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಹಾವೇರಿ ಜಿಲ್ಲೆ, ಬ್ಯಾಡಗಿ ತಾಲೂಕು, ಕೆರವಡಿ ಗ್ರಾಮದ, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ, ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಪ್ರಸಕ್ತ ಮುಂಗಡಪತ್ರದಲ್ಲಿ, ಶಿಕ್ಷಣ ಇಲಾಖೆಗೆ 45 ಸಾವಿರ ಕೋಟಿ ರೂಪಾಯಿ ಹಣ, ಮುಖ್ಯಮಂತ್ರಿ ಮೀಸಲಿರಿಸಿದ್ದಾರೆ. 4 ಸಾವಿರ ವರ್ಗ ಕೋಣೆಗಳನ್ನು ಕಟ್ಟಲಾಗಿದೆ. ಸಾವಿರದ 300 ಶಿಕ್ಷಕರನ್ನು ಈಗಾಗಲೇ ನೇಮಕ ಮಾಡಿಕೊಳ್ಳಲಾಗಿದೆ. ಶಿಕ್ಷಣ ಇಲಾಖೆಯ 2 ಸಾವಿರದ 700 ಕೋಟಿ ರೂಪಾಯಿ ಸಾಲ ಸಹ ತೀರಿಸಲಾಗಿದೆ, ಎಂದರು.

<><><>

ಉತ್ತರಕನ್ನಡ ಜಿಲ್ಲೆಯ, ಕಾರವಾರ ವಿಭಾಗದ ಅರಣ್ಯ ಇಲಾಖೆ ಈ ಋತುಮಾನದಲ್ಲಿ, ಎರಡೂವರೆ ಸಾವಿರಕ್ಕೂ ಅಧಿಕ ಹಸಿರು ಕಡಲಾಮೆ, 'ಆಲಿವ್ ರಿಡ್ಲೆ ಟರ್ಟಲ್'ಗಳನ್ನು, ಸಾರ್ವಜನಿಕ ಸಹಭಾಗಿತ್ವದಲ್ಲಿ, 111 ಗೂಡುಗಳಿಂದ ರಕ್ಷಿಸಿ, ಸಮುದ್ರಕ್ಕೆ ಬಿಡುಗಡೆ ಮಾಡಿ, ಮಾದರಿ ಕಾರ್ಯ ಮಾಡಿದೆ.

ಕಾರವಾರ ಹಾಗೂ ಹೊನ್ನಾವರದಲ್ಲಿ, ಅಂದಾಜು 10 ಸಾವಿರ ಕಡಲಾಮೆ ಮೊಟ್ಟೆ ಹಾಗೂ ಮರಿಗಳನ್ನು ರಕ್ಷಿಸಿ, ಒಂದು ಲಕ್ಷಕ್ಕೂ ಅಧಿಕ ಪ್ರೋತ್ಸಾಹ ಧನವನ್ನು ಸಾರ್ವಜನಿಕರಿಗೆ 'ಕೋಸ್ಟಲ್ ಮರೈನ್ ಸೆಲ್' ಮೂಲಕ ಅರಣ್ಯ ಇಲಾಖೆ ನೀಡಿದೆ.

ಈ ಕುರಿತು ಒಂದು ವರದಿ..

<><><>

*ಕಾರವಾರದ ರವೀಂದ್ರನಾಥ ಟ್ಯಾಗೋರ ಕಡಲ ತೀರದಲ್ಲಿ, ಹೋಳಿ ಹಬ್ಬದಲ್ಲಿ ಬಣ್ಣದೋಕುಳಿ ಆಡಲು ಬಂದಿದ್ದ ಮಕ್ಕಳು, ಪಾಲಕರು ಹಾಗೂ ಪ್ರವಾಸಿಗರು ಸೇರಿ, 150 ಕಡಲಾಮೆ ಮರಿಗಳನ್ನು, ಖುಷಿಯಿಂದ ತಮ್ಮ ಕೈಯಾರೆ ಸಮುದ್ರಕ್ಕೆ ಬಿಟ್ಟು, ಕಡಲಾಮೆ ಗೂಡು ಹಾಗೂ ಮರಿಗಳನ್ನು ರಕ್ಷಿಸುವ ಪಣ ತೊಟ್ಟರು.*

*ಕಾರವಾರ ವಿಭಾಗದಲ್ಲಿ, ಕೋಸ್ಟಲ್ ಮರೈನ್ ಸೆಲ್ ಕಳೆದ 4 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಕಡಲಾಮೆಗಳ ಗೂಡು ಮತ್ತು ಮೊಟ್ಟೆಗಳನ್ನು ರಕ್ಷಿಸಿ, ಮರಿಗಳನ್ನು ಪೋಷಿಸಿ, ಸಮುದ್ರಕ್ಕೆ ಬಿಡುವ ಮಾದರಿ ಹಾಗೂ ಮಾನವೀಯ ಕೆಲಸ ಮಾಡುತ್ತಿದೆ.*

*ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಕಾರವಾರ ವಿಭಾಗದ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ, ಸಿ.ರವಿಶಂಕರ.*

<><><>

ವಿವೇಕ ಧ್ವನಿ 49 ಸೆಕೆಂದು + ಡಿ.ಸಿ.ಎಫ್. ಸಿ.ರವಿಶಂಕರ ಧ್ವನಿ 60 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳೆರಡೂ ಪರಸ್ಪರ ಸಹಮತದಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ, ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದ್ದಾರೆ. ಶ್ರೀರಂಗ ಪಂದಾರ್ಕರ್ ಅವರ 'ವಯಂ ಭಾರತಂ' ವಿಶೇಷ ಸಂದರ್ಶನದಲ್ಲಿ, ಪಾಲ್ಗೊಂಡು ಮಾತನಾಡಿದರು. ಆಡಳಿತ ಪಕ್ಷ ತಪ್ಪು ದಾರಿಗೆ ಹೋದಾಗ, ಅದನ್ನು ಗುರುತಿಸಿ ಸರಿಪಡಿಸುವ ಮಹತ್ವದ ಜವಾಬ್ದಾರಿ ಪ್ರತಿಪಕ್ಷಗಳಿಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕಾರ್ಯವೈಖರಿಯನ್ನು ವಿಶ್ವದ ಬಹುಪಾಲು ದೇಶಗಳು ಮೆಚ್ಚಿಕೊಂಡಿವೆ. ಭಾರತ ವಿಶ್ವ ಗುರುವಾಗುವತ್ತ ಸಾಗುತ್ತಿದೆ ಎಂದು, ರಾಜ್ಯಪಾಲ ಗೆಹ್ಲೋಟ್ ತಿಳಿಸಿದರು.

<><><>

2018ರ ಹುಲಿ ಗಣತಿಯ ಪ್ರಕಾರ, ಪಶ್ಚಿಮ ಘಟ್ಟದಲ್ಲಿ 981 ಹುಲಿಗಳಿದ್ದವು. 2022ರ ಹೊತ್ತಿಗೆ, ಹುಲಿಗಳ ಸಂಖ್ಯೆ 824ಕ್ಕೆ ಇಳಿಯಿತು. ಕಳೆದ 4 ವರ್ಷಗಳಲ್ಲಿ 157 ಹುಲಿಗಳನ್ನು ಪಶ್ಚಿಮ ಘಟ್ಟ ಕಳೆದುಕೊಂಡಿದೆ. ಅಭಿವೃದ್ಧಿಯ ಹೆಸರಿನಲ್ಲಿ ಹುಲಿ ಪಥ ನಾಶವಾಗುತ್ತಿದೆ. ಹೀಗಾಗಿ, ಹುಲಿಗಳ ದುರಂತ ಸಾವು ರಾಜ್ಯದಲ್ಲಿ ನಿತ್ಯವೂ ವರದಿಯಾಗುತ್ತಿದೆ. ದೇವರ ಕಾನುಗಳನ್ನು ಪುನರುಜ್ಜೀವಿತಗೊಳಿಸಿ, ಹುಲಿ ತನ್ನ ದಾರಿಯಲ್ಲಿ ಮುಕ್ತವಾಗಿ ಸಂಚರಿಸುತ್ತ ಬದುಕಲು, ಮನುಷ್ಯರು ಸಂವೇದನಾಶೀಲ ಸಹಕಾರಿಗಳಾಗಿ ಅವಕಾಶ ನೀಡುವುದು ಮುಖ್ಯ ಎನ್ನುತ್ತಾರೆ..

<><><>

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ, ಪರಿಸರ ವಿಜ್ಞಾನಗಳ ಅಧ್ಯಯನ ಕೇಂದ್ರದ, ಕುಮಟಾ ಕ್ಷೇತ್ರ ಕೇಂದ್ರದ ಹಿರಿಯ ವಿಜ್ಞಾನಿ, ಪ್ರೊಫೆಸರ್ ಎಂ.ಡಿ. ಸುಭಾಷ್ಚಂದ್ರನ್.

<><><>

ಪ್ರೊ. ಎಂ.ಡಿ. ಸುಭಾಷ್ಚಂದ್ರನ್ ಧ್ವನಿ 60 ಸೆಕೆಂದುಗಳು

<><><>

ಗದಗ ಜಿಲ್ಲೆ, ಬಿಂಕದಕಟ್ಟಿ ಗ್ರಾಮದಲ್ಲಿ, ಮೃಗಾಲಯ ಅಭಿವೃದ್ಧಿಗಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಹಾಗೂ ಕಪ್ಪತ್ತಗುಡ್ಡ ಜೆ.ಎಲ್.ಆರ್. ಪ್ರಕೃತಿ ಶಿಬಿರದ ಶಂಕು ಸ್ಥಾಪನೆ, ವಲಯ ಅರಣ್ಯಾಧಿಕಾರಿಯ ನೂತನ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿಗೆ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಚಾಲನೆ ನೀಡಿದರು. ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಸೇರಿದಂತೆ, ಗಣ್ಯರು ಪಾಲ್ಗೊಂಡಿದ್ದರು.

<><><>

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕು ಟಿ.ಕಾಗೇಪುರ ಗ್ರಾಮದ, ಗೋಕುಲ ವಿದ್ಯಾಸಂಸ್ಥೆಯ ವಸತಿ ನಿಲಯದ, 30 ವಿದ್ಯಾರ್ಥಿಗಳು ಆಹಾರ ಸೇವಿಸಿದ ಬಳಿಕ ತೀವ್ರ ಅಸ್ವಸ್ಥಗೊಂಡಿದ್ದು, ಮೇಘಾಲಯದ 13 ವರ್ಷದ ಬಾಲಕ, ಕಿರ್ಶನ್ ಲ್ಯಾಂಗ್ ಮೃತಪಟ್ಟಿದ್ದು, ಇಬ್ಬರು ಮಕ್ಕಳ ಸ್ಥಿತಿ ಚಿಂತಾಜನಕವಾಗಿದೆ. ಮಂಡ್ಯದ ಮಿಮ್ಸ್ ಆಸ್ಪತ್ರೆಯ ಐ.ಸಿ.ಯು. ನಲ್ಲಿ ಚಿಕಿತ್ಸೆ ಮುಂದುವರೆದಿದೆ. ಆರು ಮಂದಿ ವಿರುದ್ಧ ಎಫ್.ಐ.ಆರ್. ದಾಖಲಾಗಿದ್ದು, ಮೂವರನ್ನು ಬಂಧಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವತಃ ಪರಿಸ್ಥಿತಿ ಅವಲೋಕಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಲಬುರಗಿಯಲ್ಲಿ ಗರಿಷ್ಠ 39 ದಶಾಂಶ 8 ಡಿಗ್ರಿ, ದಾವಣಗೆರೆ ಮತ್ತು ಚಾಮರಾಜನಗರದಲ್ಲಿ ಕನಿಷ್ಠ 16 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

<><><>

ರಾಜ್ಯದ ಉತ್ತರ ಒಳನಾಡಿನಲ್ಲಿ ನಾಳೆಯಿಂದ, ಮೂರು ದಿನ ಬಿಸಿ ಗಾಳಿ ಬೀಸುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><><>

ಹಾಸನ ಜಿಲ್ಲೆ, ಬೇಲೂರು ತಾಲೂಕಿನ ಹಳ್ಳಿಗದ್ದೆಯ ಶಾಂತಿ ಎಸ್ಟೇಟ್‌ನಲ್ಲಿ, ಒಂದು ಕಾಡಾನೆಯನ್ನು, ಅರಣ್ಯ ಇಲಾಖೆ ಸೆರೆ ಹಿಡಿದಿದೆ.

<><><>

ಚಿಕ್ಕಮಗಳೂರು ಜಿಲ್ಲೆ, ಕಳಸ ಸಮೀಪ, ಭದ್ರಾ ನದಿಯಲ್ಲಿ ಈಜಲು ತೆರಳಿದ್ದ, ಬೆಂಗಳೂರು ಮೂಲದ ಇಬ್ಬರು ಪ್ರವಾಸಿಗರು, ನದಿಯಲ್ಲಿ ಮುಳುಗಿ ಮೃತಪಟ್ಟ ಘಟನೆ ವರದಿಯಾಗಿದೆ.

<><><>

ಯಾದಗಿರಿ ಜಿಲ್ಲೆಯ, ಕುಡಿಯುವ ನೀರಿನ ಸಮಸ್ಯೆ ನಿರ್ವಹಿಸಲು, ನಿಯಂತ್ರಣ ಕೊಠಡಿ ಆರಂಭಿಸಲಾಗಿದೆ ಎಂದು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಲವೀಶ್ ಒರಡಿಯಾ ತಿಳಿಸಿದ್ದಾರೆ.

<><><>

ಚುನಾವಣಾ ಆಯೋಗದ ಆಯುಕ್ತ, ಸುಖಬೀರಸಿಂಗ್ ಸಂಧು, ಕೊಪ್ಪಳ ಜಿಲ್ಲೆಯ, ಅಂಜನಾದ್ರಿ ಬೆಟ್ಟಕ್ಕೆ ಭೇಟಿ ನೀಡಿ, ಮಾರುತೇಶನ ದರ್ಶನ ಪಡೆದರು.

<><><>

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತ ಕೆ.ಬಿ. ಶಿವಕುಮಾರ, ಮಂಗಳೂರಿನ ವೆನ್‌ಲಾಕ್ ಹಾಗೂ ಲೇಡಿ ಗೋ ’ನ್ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

<><><>

ಚಿತ್ರದುರ್ಗ ಜಿಲ್ಲೆ ಚಳ್ಳಕರೆ ತಾಲೂಕಿನ, ನಾಯಕನಹಟ್ಟಿ ಗುರು ತಿಪ್ಪೇರುದ್ರಸ್ವಾಮಿ ರಥೋತ್ಸವ, ಲಕ್ಷಾಂತರ ಭಕ್ತಾದಿಗಳ ಮಧ್ಯೆ, ಶ್ರದ್ಧಾ, ಭಕ್ತಿಯಿಂದ ಜರುಗಿತು.

<><><>

ಮಾಜಿ ಸಚಿವ ದಿವಂಗತ ಕೆ.ಎಚ್.ಪಾಟೀಲ ಜನ್ಮಶತಮಾನೋತ್ಸವ ಕಾರ್ಯಕ್ರಮನ್ನು ಗದಗನಲ್ಲಿ, ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉದ್ಘಾಟಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮಂಗಳೂರು ಪೊಲೀಸರಿಂದ, 75 ಕೋಟಿ ರೂಪಾಯಿ ಮೌಲ್ಯದ, ಮಾದಕ ದ್ರವ್ಯ ವಶ; ಮುಖ್ಯಮಂತ್ರಿ ಶ್ಲಾಘನೆ.
- ಶಿಕ್ಷಣ ಇಲಾಖೆಯಿಂದ, ಶೀಘ್ರ 5 ಸಾವಿರ ಶಿಕ್ಷಕರ ನೇಮಕಾತಿ – ಸಚಿವ ಮಧು ಬಂಗಾರಪ್ಪ.
- ಕಾರವಾರ 'ಕೋಸ್ಟಲ್ ಮರೈನ್ ಸೆಲ್': 10 ಸಾವಿರ, ಹಸಿರು ಕಡಲಾಮೆ ಮೊಟ್ಟೆ ಹಾಗೂ ಮರಿ ರಕ್ಷಿಸಿ, ಸಮುದ್ರಕ್ಕೆ ಬಿಡುಗಡೆ.
- ಆಡಳಿತ ಪಕ್ಷ ಹಾಗೂ ಪ್ರತಿಪಕ್ಷದ ಸಹಮತದಿಂದ, ಅಭಿವೃದ್ಧಿ ಸಾಧ್ಯ – ರಾಜ್ಯಪಾಲ ಥಾವರಚಂದ್ ಗೆಹ್ಲೋಟ್.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>